**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 13

ಚಾ.ಸಾ. 33

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 24.11.2025**

| | |
|---|---|
| ಸಾಕ್ಷಿದಾರರ ಹೆಸರು | ಯೊಗೇಶ್ |
| ತಂದೆಯ ಹೆಸರು | ಚಿಕ್ಕಮೊಗ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೀಲಕಂಠನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ನಮ್ಮ ಊರಿನಿಂದ ತೊಪ್ಪನಹಳ್ಳಿ 5 ಕಿ.ಮೀ. ದೂರ ಇದೆ. ತೊಪ್ಪನಹಳ್ಳಿ ಗ್ರಾಮದ ಚಾಸಾ.1 ರಿಂದ ಚಾಸಾ.18 ನನಗೆ ಗೊತ್ತಿಲ್ಲ. ಪ್ರಕರಣದ ಆರೋಪಿಗಳೂ ಕೂಡ ನನಗೆ ಗೊತ್ತಿಲ್ಲ. ನಾನು ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿ ನಿಪಿ.2 ಸ್ಥಳ ಪಂಚನಾಮೆಯನ್ನು ನೋಡಿ ಅದರಲ್ಲಿ ತನ್ನ ಸಹಿ ಎಂದು ಗುರುತಿಸಿದ ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಆ ಸಹಿಯನ್ನು ನಾನು 2017 ನೇ ಇಸವಿಯಲ್ಲಿ ಮದ್ದೂರು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ನಾನು ನನ್ನ ತಾಯಿಯ ಚೈನು ಕಳುವು ಆದ ಬಾಬ್ತು ಮದ್ದೂರು ಠಾಣೆಗೆ ದೂರು ನೀಡಲು ಹೋಗಿದ್ದಾಗ, ಪೊಲೀಸರು ನಿಪಿ.2 ಕ್ಕೆ ನನ್ನ ಸಹಿ ಪಡೆದಿದ್ದಾರೆ. ಪೊಲೀಸರು ನನ್ನನ್ನು ಆ ದಿನ ಬೇರೆ ಎಲ್ಲೂ ಕರೆದುಕೊಂಡು ಹೋಗಿಲ್ಲ. ನಾನು ನಿಪಿ.2 ಕ್ಕೆ ಠಾಣೆ ಬಿಟ್ಟು ಬೇರೆ ಎಲ್ಲೂ ಸಹಿ ಮಾಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 25.12.2016 ರಂದು ತೊಪ್ಪನಹಳ್ಳಿಯ ಅರಳೀಮರದ ಬಳಿಗೆ ಗಲಾಟೆಯಾದ ಬಾಬ್ತು ಬೆಳಗ್ಗೆ 9.00 ಗಂಟೆಗೆ ಬಂದಿದ್ದರು, ಅಲ್ಲಿ ಚಾಸಾ.6 ಮುತ್ತುಲಿಂಗಯ್ಯರವರು ಅರಳೀಮರದ ಬಳಿ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ದಿನಾಂಕ 25.12.2016 ರಂದು ಗಲಾಟೆಯಾಗಿದ್ದು ಎಂದು ಹೇಳಿದರು, ಅಲ್ಲಿ ಪೊಲೀಸರು 9.00 ರಿಂದ 10.00 ಗಂಟೆಯವರೆಗೆ ಈಗ ಓದಿ ಹೇಳಿದಂತೆ ಸ್ಥಳ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ತೊಪ್ಪನಹಳ್ಳಿ ಗ್ರಾಮದವರು ನಮ್ಮ ಪಕ್ಕದ ಗ್ರಾಮದವರು ಆಗಿದ್ದು, ನಿಪಿ.2 ಪಂಚನಾಮೆ ಮಾಡುವಾಗ ನಾನು ಸದರಿ ಜಾಗದಲ್ಲಿ ಇದ್ದರೂ, ನಿಪಿ.2 ಕ್ಕೆ ಅಲ್ಲಿಯೇ ಸಹಿ ಮಾಡಿದ್ದರೂ, ಆರೋಪಿಗಳ ದ್ವೇಷ ಕಟ್ಟಿಕೊಳ್ಳಬಾರದೆಂಬ ಉದ್ದೇಶದಿಂದ ಆರೋಪಿಗಳ ವಿರುದ್ಧ ಸಾಕ್ಷಿ ಹೇಳುತ್ತಿಲ್ಲ ಮತ್ತು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.